# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 560 |
| ಸದಸ್ಯರ ಹೆಸರು | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | 08/12/2023 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 'ಸಾವಯವ ಕೃಷಿ'ಗೆ ಒಳಪಟ್ಟಿರುವ ಕೃಷಿ ಭೂಮಿಯ ವಿಸ್ತೀರ್ಣವೆಷ್ಟು; | APEDA ಅಂಕಿ ಅಂಶಗಳನ್ವಯ ರಾಜ್ಯದಲ್ಲಿ 2022-23 ನೇ ಸಾಲಿಗೆ ಸಾವಯವ ಕೃಷಿಗೆ ಒಳಪಟ್ಟಿರುವ ಕೃಷಿ ಭೂಮಿಯ ವಿಸ್ತೀರ್ಣ 82015.56 ಹೆಕ್ಟೇರ್. |
| ಆ) | 'ಸಾವಯವ ಕೃಷಿ ' ಉತ್ತೇಜನಕ್ಕೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು; | ಸಾವಯವ ಕೃಷಿ ಉತ್ತೇಜನಕ್ಕೆ ಇಲಾಖಾವತಿಯಿಂದ ಸರ್ಕಾರ ರೂಪಿಸಿರುವ ಯೋಜನೆಗಳು ಮತ್ತು ಕಾರ್ಯಕ್ರಮಗಳು ಈ ಕೆಳಕಂಡಂತಿವೆ;<br><br>**ಅ) ಸಾವಯವ ಕೃಷಿ ಅಳವಡಿಕೆ ಮತ್ತು ದೃಢೀಕರಣ:**<br>ಕಾರ್ಯಕ್ರಮದಡಿ ರಾಜ್ಯದ ಆಸಕ್ತ ಸಾವಯವ ರೈತ/ಗುಂಪುಗಳ ಕ್ಷೇತ್ರವನ್ನು ಕರ್ನಾಟಕ ರಾಜ್ಯ ಬೀಜ ಮತ್ತು ಸಾವಯವ ಪ್ರಮಾಣನ ಸಂಸ್ಥೆ (KSSOCA)ಯಡಿ ನೋಂದಾಯಿಸಿ ಸಾವಯವ ಪ್ರಮಾಣೀಕರಣದ ವ್ಯಾಪ್ತಿಗೆ ಒಳಪಡಿಸುವ ಸಂಬಂಧದ ವೆಚ್ಚವನ್ನು KSSOCA ಸಂಸ್ಥೆಯ ಮೂಲಕ ಭರಿಸಲಾಗುತ್ತಿದೆ.<br><br>**ಆ). ರೈತಸಿರಿ ಮತ್ತು ಸಿರಿಧಾನ್ಯ ಉತ್ತೇಜನ ಕಾರ್ಯಕ್ರಮಗಳು:**<br>ರಾಜ್ಯದ ಸಿರಿಧಾನ್ಯ ಕ್ಷೇತ್ರವನ್ನು ವಿಸ್ತರಿಸುವ ನಿಟ್ಟಿನಲ್ಲಿ ಪ್ರಮುಖ ಸಿರಿಧಾನ್ಯಗಳಾದ ಊದಲು, ನವಣೆ, ಹಾರಕ, ಕೊರಲೆ, ಸಾಮೆ ಮತ್ತು ಬರಗು ಬೆಳೆಗಳನ್ನು ಬೆಳೆಯುವ ರೈತರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪ್ರತಿ ಹೆಕ್ಟೇರ್ ಗೆ ರೂ. 10,000/- ಗಳಂತೆ ಗರಿಷ್ಠ 2 ಹೆಕ್ಟೇರ್ ಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.<br><br>ಸಿರಿಧಾನ್ಯಗಳ ಸಂಸ್ಕರಣೆಗೆ ಉತ್ತೇಜನ ನೀಡುವ ಉದ್ದೇಶದೊಂದಿಗೆ ಸಿರಿಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆ, ವರ್ಗೀಕರಣ, ಪ್ಯಾಕಿಂಗ್ ಮತ್ತು ಬ್ರ್ಯಾಂಡಿಂಗ್ ಯಂತ್ರೋಪಕರಣಗಳಿಗೆ ಒಟ್ಟು ಯಂತ್ರೋಪಕರಣಗಳ ವೆಚ್ಚದ ಮೇಲೆ ಶೇ.50 ರಷ್ಟು ಅಥವಾ ಗರಿಷ್ಠ ರೂ. 10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತಿದೆ. |

| | | |
|---|---|---|
| | | **ಇ) ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ:**<br>ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವ ಸಲುವಾಗಿ ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್'ಗೆ ರೂ.2500/-ಗಳನ್ನು(ಶೇ.100) ಮೀರದಂತೆ ಸಹಾಯಧನ ನೀಡಲಾಗುತ್ತಿದೆ. ಜೊತೆಗೆ ಹಸಿರೆಲೆ ಗೊಬ್ಬರ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ವರ್ಗದ ರೈತರಿಗೆ ಶೇ.75ರ ರಿಯಾಯಿತಿ ದರದಲ್ಲಿ ಪ್ರಮುಖವಾಗಿ ಡಯಾಂಚಾ, ಸನ್ಹೆಂಪ್ ಇತ್ಯಾದಿ ಹಸಿರೆಲೆ ಗೊಬ್ಬರ ಬೀಜಗಳನ್ನು ವಿತರಣೆ ಮಾಡಲಾಗುತ್ತಿದೆ.<br>**ಈ) ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳ ವಿತರಣಾ ಕಾರ್ಯಕ್ರಮ:**<br>ಜೈವಿಕ ಪೀಡೆನಾಶಕಗಳ ಬಳಕೆಯನ್ನು ಉತ್ತೇಜಿಸಲು ಹಾಗೂ ಸಾವಯವ ಕೃಷಿಯೆಡೆಗೆ ರೈತರನ್ನು ಕೊಂಡೊಯ್ಯುವ ಉದ್ದೇಶದಿಂದ ಇಲಾಖೆಯ ರೈತ ಸಂಪರ್ಕ ಕೇಂದ್ರಗಳ ಮೂಲಕ ಶೇ. 50 ರ ರಿಯಾಯಿತಿ ದರದಲ್ಲಿ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳನ್ನು ರೈತರಿಗೆ ವಿತರಿಸಲಾಗುತ್ತಿದೆ.<br>**ಉ) ಕೇಂದ್ರ ಪುರಸ್ಕೃತ - ಆಹಾರ ಮತ್ತು ಪೌಷ್ಠಿಕ ಭದ್ರತೆ (ಹಿಂದಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ) ಮತ್ತು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಯೋಜನೆ:**<br>ಬೆಳೆವಾರು ಕಾರ್ಯಕ್ರಮಗಳಡಿ ಸಮಗ್ರ ಪೋಷಕಾಂಶ ನಿರ್ವಹಣೆ ಘಟಕಗಳಡಿ ಜೈವಿಕ ಗೊಬ್ಬರಗಳಾದ ರೈಜೋಬಿಯಂ/PSB ಮತ್ತು ಹಸಿರೆಲೆ ಬಿತ್ತನೆ ಬೀಜಗಳನ್ನು ಶೇ 50ರ ರಿಯಾಯಿತಿ ದರದಲ್ಲಿ ವಿತರಿಸಲಾಗುತ್ತಿದೆ. |
| ಇ) | 'ಸಾವಯವ ಕೃಷಿ' ಕೈಗೊಳ್ಳುತ್ತಿರುವ ರೈತರಿಗೆ ಸರ್ಕಾರದಿಂದ ದೊರೆಯುತ್ತಿರುವ ನೆರವು ಮತ್ತು ಸೌಲಭ್ಯಗಳು ಯಾವುವು; | ಸಾವಯವ ಕೃಷಿ ಕೈಗೊಳ್ಳುತ್ತಿರುವ ರೈತರಿಗೆ ಸರ್ಕಾರದಿಂದ ದೊರೆಯುತ್ತಿರುವ ನೆರವು ಮತ್ತು ಸೌಲಭ್ಯಗಳೆಂದರೆ;<br>• ಸಾವಯವ ಪ್ರಮಾಣೀಕರಣ ಕಾರ್ಯಕ್ರಮದಡಿ ಗುಂಪು ಪ್ರಸ್ತಾವನೆಗಳಿಗೆ ಹಾಗು ವ್ಯಕ್ತಿಗತ ಪ್ರಸ್ತಾವನೆಗಳಿಗೆ ಪ್ರಮಾಣೀಕರಣ ಶುಲ್ಕದ ಶೇ.90 ರಷ್ಟು ಸಹಾಯಧನವನ್ನು KSSOCA ಸಂಸ್ಥೆಯ ಮುಖಾಂತರ ನೀಡಲಾಗುತ್ತಿದೆ. ಗುಂಪು ಪ್ರಸ್ತಾವನೆಗಳ ಪ್ರಮಾಣೀಕರಣಕ್ಕೆ ರೂ.30000/- ಹಾಗು ವ್ಯಕ್ತಿಗತ ಪ್ರಸ್ತಾವನೆಗಳಿಗೆ ರೂ.5000/- ಶುಲ್ಕ ನಿಗದಿಪಡಿಸಲಾಗಿರುತ್ತದೆ. |

| | | |
|---|---|---|
| | | • ರೈತಸಿರಿ ಯೋಜನೆಯಡಿ ಸಿರಿಧಾನ್ಯ ಬೆಳೆಗಾರರಿಗೆ ಬೆಳೆ ಸಮೀಕ್ಷೆ ಆಧಾರದ ಮೇರೆಗೆ ಪ್ರತಿ ಹೆಕ್ಟೇರ್ ಗೆ ರೂ. 10,000/- ಗಳಂತೆ ಗರಿಷ್ಠ 2 ಹೆಕ್ಟೇರ್ ಗಳಿಗೆ ಪ್ರೋತ್ಸಾಹಧನವನ್ನು ನೀಡಲಾಗುತ್ತದೆ. ಸಿರಿಧಾನ್ಯಗಳ ಸಂಸ್ಕರಣಾ ಯಂತ್ರೋಪಕರಣಗಳಿಗೆ ಶೇ.50 ಅಥವಾ ಗರಿಷ್ಠ ರೂ. 10.00 ಲಕ್ಷಗಳವರೆಗೆ ಸಹಾಯಧನವನ್ನು ನೀಡಲಾಗುತ್ತದೆ.<br>• ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನದಡಿ ಮಣ್ಣಿನಲ್ಲಿ ಸಾವಯವ ಇಂಗಾಲ ಹೆಚ್ಚಿಸುವ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸುವ ಸಲುವಾಗಿ ಸಾವಯವ ಇಂಗಾಲ ಹೆಚ್ಚಿಸುವ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸಲು ಫಲಾನುಭವಿ ರೈತರಿಗೆ ಪ್ರತಿ ಹೆಕ್ಟೇರ್'ಗೆ ರೂ.2500/- ಗಳನ್ನು(ಶೇ.100) ಮೀರದಂತೆ ಸಹಾಯಧನ ನೀಡಲಾಗುತ್ತಿದೆ. ಜೊತೆಗೆ ಹಸಿರೆಲೆ ಗೊಬ್ಬರ ಬಳಕೆಯನ್ನು ಪ್ರೋತ್ಸಾಹಿಸಲು ಎಲ್ಲಾ ವರ್ಗದ ರೈತರಿಗೆ ಶೇ.75ರ ಸಹಾಯಧನದಡಿ ಪ್ರಮುಖವಾಗಿ ಡಯಾಂಚಾ, ಸನ್ಹೆಂಪ್ ಇತ್ಯಾದಿ ಹಸಿರೆಲೆ ಗೊಬ್ಬರ ಬೀಜಗಳನ್ನು ನೀಡಲಾಗುತ್ತದೆ.<br>• ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳ ವಿತರಣಾ ಕಾರ್ಯಕ್ರಮದಡಿ ರೈತರಿಗೆ ಜೈವಿಕ ಪೀಡೆನಾಶಕ ಹಾಗೂ ಜೈವಿಕ ನಿಯಂತ್ರಣಾಕಾರಕಗಳಿಗೆ ಶೇ. 50 ರ ಸಹಾಯಧನವನ್ನು ನೀಡಲಾಗುತ್ತದೆ.<br>• ಕೇಂದ್ರ ಪುರಸ್ಕೃತ - ಆಹಾರ ಮತ್ತು ಪೌಷ್ಠಿಕ ಭದ್ರತೆ (ಹಿಂದಿನ ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ) ಮತ್ತು ರಾಷ್ಟ್ರೀಯ ಖಾದ್ಯ ತೈಲ ಅಭಿಯಾನ ಯೋಜನೆಯಡಿ ಜೈವಿಕ ಗೊಬ್ಬರಗಳಾದ ರೈಜೋಬಿಯಂ/PSB ಮತ್ತು ಹಸಿರೆಲೆ ಗೊಬ್ಬರ ಬಿತ್ತನೆ ಬೀಜಗಳಿಗೆ ಶೇ 50 ರ ಸಹಾಯಧನವನ್ನು ನೀಡಲಾಗುತ್ತದೆ. |
| ಈ) | ರೈತರು ಬೆಳೆಯುವ 'ಸಾವಯವ ಕೃಷಿ' ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಒಳ್ಳೆಯ ಬೆಲೆ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಸಾವಯವ ಕೃಷಿ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಮತ್ತು ಒಳ್ಳೆಯ ಬೆಲೆ ದೊರೆಯುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳು ಈ ಕೆಳಕಂಡಂತಿವೆ.<br>➢ ರಾಜ್ಯದ ಸಾವಯವ ಬೆಳೆಗಾರರು ಬೆಳೆದ ಉತ್ಪನ್ನಗಳ ಮಾರಾಟಕ್ಕೆ ಸೂಕ್ತ ಮಾರುಕಟ್ಟೆ ಹಾಗೂ ಉತ್ತಮ ಧಾರಣೆ ದೊರಕಿಸಿಕೊಡುವ ನಿಟ್ಟಿನಲ್ಲಿ ಸಾವಯವ ಕೃಷಿಕರ ಸಂಘಗಳನ್ನು ಒಗ್ಗೂಡಿಸಿ 15 ಪ್ರಾಂತೀಯ ಸಹಕಾರ ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು 2016-17 ನೇ ಸಾಲಿನಲ್ಲಿ ರಾಜ್ಯಾದ್ಯಂತ ರಚಿಸಲಾಗಿರುತ್ತದೆ. |

| | | |
|---|---|---|
| | | ➤ ರಾಜ್ಯದ ಸಾವಯವ ಮತ್ತು ಸಿರಿಧಾನ್ಯ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸಂಪರ್ಕ ಒದಗಿಸಿಕೊಡುವ ನಿಟ್ಟಿನಲ್ಲಿ ಹಾಗು ಗ್ರಾಹಕರಲ್ಲಿ /ಪಾಲುದಾರರಲ್ಲಿ ಅರಿವು ಮೂಡಿಸಲು ಸಾವಯವ ಮತ್ತು ಸಿರಿಧಾನ್ಯ ಕಾರ್ಯಾಗಾರ /ಮೇಳಗಳು / ವಸ್ತು ಪ್ರದರ್ಶನಗಳನ್ನು ಆಯೋಜಿಸಲಾಗಿದೆ.<br>➤ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಆಯೋಜಿಸಲಾಗುವ ಕೃಷಿ ಮೇಳಗಳಲ್ಲಿ ಸಾವಯವ ಸಿರಿಧಾನ್ಯ ಉತ್ಪನ್ನಗಳ ಪ್ರತ್ಯೇಕ ಪೆವಿಲಿಯನ್ ಗಳನ್ನು ಸ್ಥಾಪಿಸಲಾಗಿರುತ್ತದೆ. ಅಲ್ಲದೇ ಇತರೆ ರಾಜ್ಯಗಳಲ್ಲಿ ಆಯೋಜಿಸುವ ಮೇಳಗಳಲ್ಲಿ ಭಾಗವಹಿಸಲಾಗುತ್ತಿದೆ.<br>➤ ಬೆಂಗಳೂರಿನಲ್ಲಿ 2017 ರಲ್ಲಿ ರಾಷ್ಟ್ರ ಮಟ್ಟದ ಹಾಗೂ 2018, 2019 ಮತ್ತು 2023 ರಲ್ಲಿ ಅಂತರರಾಷ್ಟ್ರೀಯ ವಾಣಿಜ್ಯ ಮೇಳಗಳನ್ನು ಆಯೋಜಿಸಲಾಗಿದೆ.<br>➤ ಜಿಲ್ಲಾ ಮಟ್ಟದ ಸಾವಯವ ಮತ್ತು ಸಿರಿಧಾನ್ಯಗಳ ಮೇಳಗಳನ್ನು ಜಿಲ್ಲೆಗಳಲ್ಲಿ ಆಯೋಜಿಸಲಾಗಿರುತ್ತದೆ.<br>➤ ಪ್ರಸ್ತುತ ಸಿರಿಧಾನ್ಯ ಮತ್ತು ಸಾವಯವ 2024 ಅಂತರರಾಷ್ಟ್ರೀಯ ವಾಣಿಜ್ಯ ಮೇಳವನ್ನು ಜನವರಿ 05 ರಿಂದ 07, 2024 ರವರೆಗೆ ಆಯೋಜಿಸಲಾಗುತ್ತಿದೆ. |

**ಸಂಖ್ಯೆ: AGRI/240/ACT/2023**

**(ಎನ್. ಚಲುವರಾಯಸ್ವಾಮಿ)**
**ಕೃಷಿ ಸಚಿವರು**